# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **481** |
| **ಸದಸ್ಯರ ಹೆಸರು** | : | ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 04.02.2021 |
| **ಉತ್ತರಿಸುವ ಸಚಿವರು** | : | ಮುಖ್ಯಮಂತ್ರಿಗಳು |

*****

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮಂಡಳಿಯು 2019 ರ ಫೆಬ್ರುವರಿ 20 ರಂದು ಖಾಲಿಯಿದ್ದ AEE, AE, JE, JPA, JA ಸೇರಿದಂತೆ ಒಟ್ಟು 3646 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ 2 ವರ್ಷಗಳೇ ಕಳೆದರು ಕೂಡ ನೇಮಕಾತಿ ಪ್ರಕ್ರಿಯೆ ನಡೆಸದೇ ಇರಲು ಕಾರಣವೇನು: | 1. i. ಏಪ್ರಿಲ್-2019 ಮತ್ತು ಮೇ-2019 ರ ಅವಧಿಯಲ್ಲಿ ಲೋಕಸಭಾ ಚುನಾವಣೆ ನಡೆದ ಕಾರಣ ಮತ್ತು ದಿನಾಂಕ: 12.11.2019 ರಂದು ನಡೆದ 118 ನೇ ಮಂಡಳಿ ಸಭೆಯಲ್ಲಿ ಕವಿಮಂ ನೌಕರಿ ಭರ್ತಿ ಮತ್ತು ಬಡ್ತಿ ನಿಯಮಾವಳಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯ ನೇರ ನೇಮಕಾತಿ ಮತ್ತು ಬಡ್ತಿ ಕೋಟಾವನ್ನು ಕ್ರಮವಾಗಿ ಶೇ.10 ಮತ್ತು ಶೇ.90 ಕ್ಕೆ ನಿಗದಿಪಡಿಸಿ ತಿದ್ದುಪಡಿ ಮಾಡಲಾಯಿತು. ಇದರಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಗೆ ಕರೆಯಲಾಗಿದ್ದ ಉದ್ಯೋಗ ಪ್ರಕಟಣೆಯನ್ನು ಮಾತ್ರ ದಿನಾಂಕ: 06.01.2020 ರಂದು ಹಿಂಪಡೆಯಲಾಗಿರುತ್ತದೆ.<br><br>ii. ದಿನಾಂಕ: 25.02.2019 ರ ಉದ್ಯೋಗ ಪ್ರಕಟಣೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯ ನೇಮಕಾತಿ ವಿರುದ್ಧ ಶ್ರೀಮತಿ.ಮಂಜುಳ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ: 06.03.2019 ರಂದು ರಿಟ್ ಅರ್ಜಿ ಸಂಖ್ಯೆ: 10742-10864/2019 ನ್ನು ಸಲ್ಲಿಸಿದ್ದರು. ಮಾನ್ಯ ನ್ಯಾಯಾಲಯವು ದಿನಾಂಕ: 02.07.2019 ರ ಮಧ್ಯಂತರ ತೀರ್ಪಿನಲ್ಲಿ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆಯನ್ನು ರಿಟ್ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟು ಮುಂದುವರೆಸುವಂತೆ ಆದೇಶಿಸಿರುತ್ತದೆ. ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯವು, ದಿನಾಂಕ: 20.01.2020 ರಲ್ಲಿ ವಜಾಗೊಳಿಸಿ ಆದೇಶಿಸಿರುತ್ತದೆ.<br>2. ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉಂಟಾಗಿದ್ದ ನೆರೆ ಹಾವಳಿಯಿಂದಾಗಿ ಕವಿಪ್ರನಿನಿ ಮತ್ತು ಎಸ್ಕಾಂಗಳ ಸಿಬ್ಬಂದಿಗಳು ನಿರಂತರ ವಿದ್ಯುತ್ ಸರಬರಾಜು ಪೂರೈಕೆ ಕಾರ್ಯದಲ್ಲಿ ನಿರತರಾಗಿದ್ದರಿಂದ ಹಾಗೂ ಮಾರ್ಚ್-2020 ರಿಂದ ಕೊರೊನಾ ವೈರಸ್ ಹರಡುವಿಕೆಯಿಂದ, ವಾಣಿಜ್ಯ/ಕೈಗಾರಿಕಾ ಸ್ಥಾವರಗಳ ವಿದ್ಯುತ್ ಬೇಡಿಕೆ ಕಡಿಮೆಯಾಗಿದ್ದುದರಿಂದ, ಕಂದಾಯ ವಸೂಲಾತಿಯಲ್ಲಿ ಗಣನೀಯ ಇಳಿಕೆಯಾಗಿ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುತ್ತದೆ. ಸದರಿ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿರುವುದರಿಂದ, ಅಲ್ಲದೆ ಈ ಹುದ್ದೆಗಳಿಗೆ ಆಪ್ಟಿಟ್ಯೂಡ್ ಪರೀಕ್ಷಾ ಪ್ರಕ್ರಿಯೆಯು ಪ್ರಾರಂಭಗೊಳ್ಳದೆ ಇದ್ದುದರಿಂದ ಮತ್ತು ನಿಗಮ/ಎಸ್ಕಾಂಗಳ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ ಇದ್ದುದರಿಂದ, ಸರ್ಕಾರದ ಅನುಮೋದನೆಯನ್ನು ಪಡೆದು |

| | | |
|---|---|---|
| | | ನೇರ ನೇಮಕಾತಿ ಕೈಗೊಳ್ಳಲಾಗಿದ್ದ AE, JE, JPA, JA ಹುದ್ದೆಗಳು ಸೇರಿದಂತೆ, ಒಟ್ಟು 1559 ಹುದ್ದೆಗಳನ್ನು ಭರ್ತಿ ಮಾಡುವುದನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 'ರದ್ದುಗೊಳಿಸುವ ಅಂಶವನ್ನು' ದಿನಾಂಕ: 09.09.2020 ರಂದು ನಡೆದ ನಿಗಮದ ನಿರ್ದೇಶಕರುಗಳ 121ನೇ ಮಂಡಳಿ ಸಭೆಯ ಗಮನಕ್ಕೆ ತಂದು, ದಿನಾಂಕ: 21.11.2020 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br><br>3. ಇನ್ನುಳಿದಂತೆ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕೈಗೊಳ್ಳಲಾಗಿರುವ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್ ಮ್ಯಾನ್ ಹುದ್ದೆಗಳ (ಒಟ್ಟು 1899 ಹುದ್ದೆಗಳು) ನೇರ ನೇಮಕಾತಿ ಪ್ರಕ್ರಿಯೆಯ ಮೊದಲನೇ ಹಂತವಾದ ಸಹನಾ ಶಕ್ತಿ ಪರೀಕ್ಷೆಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಪ್ರಸ್ತುತ ಅಂಗವಿಕಲ ಕೋಟಾದಡಿಯಲ್ಲಿ ಅರ್ಹರಾಗಿರುವ ಅಭ್ಯರ್ಥಿಗಳ ದೈಹಿಕ ಪರೀಕ್ಷೆಯನ್ನು ಸರ್ಕಾರದ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಮಂಡಳಿಯಿಂದ ನಡೆಸಲಾಗುತ್ತಿದೆ. ದೈಹಿಕ ಪರೀಕ್ಷೆ ಪೂರ್ಣಗೊಂಡು ವರದಿಗಳನ್ನು ಸ್ವೀಕರಿಸಿದ ನಂತರ, ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು. ತದನಂತರ, ಅಂತಿಮ ಆಯ್ಕೆ ಪಟ್ಟಿಯನ್ವಯ ಆಯ್ಕೆಗೊಳ್ಳುವ ಅರ್ಹ ಅಭ್ಯರ್ಥಿಗಳಿಗೆ ಮಾರ್ಚ್-2021 ರ ನಂತರ ನೇಮಕಾತಿ ಆದೇಶವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು. |
| ಆ) | ಅಲ್ಲದೇ ಹಠಾತ್ತನೆ ದಿನಾಂಕ:21 ನವೆಂಬರ್ 2020 ರಂದು ಈ ಹುದ್ದೆಗಳ ನೇಮಕಾತಿಯನ್ನು ಕೆಲವು ಆಡಳಿತಾತ್ಮಕ ಕಾರಣವನ್ನು ನೀಡಿ ರದ್ದುಗೊಳಿಸಲು ಕಾರಣವೇನು: | ಮಾರ್ಚ್-2020 ರಿಂದ ಕೊರೊನಾ ವೈರಸ್ ಹರಡುವಿಕೆಯಿಂದ, ವಾಣಿಜ್ಯ/ಕೈಗಾರಿಕಾ ಸ್ಥಾವರಗಳ ವಿದ್ಯುತ್ ಬೇಡಿಕೆ ಕಡಿಮೆಯಾಗಿದ್ದುದರಿಂದ, ಕಂದಾಯ ವಸೂಲಾತಿಯಲ್ಲಿ ಗಣನೀಯ ಇಳಿಕೆಯಾಗಿ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುತ್ತದೆ. ಸದರಿ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿರುವುದರಿಂದ, ನಿಗಮ/ಎಸ್ಕಾಂಗಳ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ ಇದ್ದುದರಿಂದ, ಸರ್ಕಾರದ ಅನುಮೋದನೆಯನ್ನು ಪಡೆದು, ನೇರ ನೇಮಕಾತಿ ಕೈಗೊಳ್ಳಲಾಗಿದ್ದ AE, JE, JPA, JA ಹುದ್ದೆಗಳು ಸೇರಿದಂತೆ, ಒಟ್ಟು 1559 ಹುದ್ದೆಗಳನ್ನು ಭರ್ತಿ ಮಾಡುವುದನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ರದ್ದುಗೊಳಿಸುವ ಅಂಶವನ್ನು ದಿನಾಂಕ: 09.09.2020 ರಂದು ನಡೆದ ನಿಗಮದ ನಿರ್ದೇಶಕರುಗಳ 121ನೇ ಮಂಡಳಿ ಸಭೆಯ ಗಮನಕ್ಕೆ ತಂದು ದಿನಾಂಕ: 21.11.2020 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡಿದ್ದಲ್ಲಿ ನಿಗಮ/ಎಸ್ಕಾಂಗಳಿಗೆ, ರೂ.107.46 ಕೋಟಿಯಷ್ಟು ವಾರ್ಷಿಕ ವೆಚ್ಚ ಉಂಟಾಗುತ್ತಿತ್ತು. ಈ ಅಧಿಕ ವೆಚ್ಚವನ್ನು ರಾಜ್ಯದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ವರ್ಗಾಯಿಸಬೇಕಾಗುತ್ತದೆ. |

| | | |
|---|---|---|
| ಇ) | ಇನ್ನುಳಿದ ಇಲಾಖೆಗಳ ನೇಮಕಾತಿಗಳು ನಡೆಯುತ್ತಿದ್ದರೂ ಕೂಡ ಕೇವಲ ಈ ಇಲಾಖೆಯ ನೇಮಕಾತಿಯನ್ನು ಮಾತ್ರ ತಡೆಹಿಡಿದು ರದ್ದುಗೊಳಿಸಲು ಕಾರಣವೇನು: | ಇತರೆ ಇಲಾಖೆಗಳಂತೆ ಕವಿಪ್ರನಿನಿ ಮತ್ತು ಎಸ್ಕಾಂಗಳ ಆಡಳಿತಾತ್ಮಕ ವೆಚ್ಚಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುವುದಿಲ್ಲ. ಎಲ್ಲಾ ಸಂಪನ್ಮೂಲವನ್ನು ವಿದ್ಯುತ್ ಗ್ರಾಹಕರಿಂದಲೇ ಸಂಗ್ರಹಿಸಬೇಕಿರುತ್ತದೆ. ಕೋವಿಡ್-19 ವೈರಾಣು ಹರಡುವಿಕೆಯಿಂದ ವಾಣಿಜ್ಯ/ಕೈಗಾರಿಕಾ ಸ್ಥಾವರಗಳ ವಿದ್ಯುತ್ ಬೇಡಿಕೆ ಕಡಿಮೆಯಾಗಿದ್ದುದರಿಂದ, ಕಂದಾಯ ವಸೂಲಾತಿಯಲ್ಲಿ ಗಣನೀಯ ಇಳಿಕೆಯಾಗಿ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುತ್ತದೆ. ಸದರಿ ಆರ್ಥಿಕ ಬಿಕ್ಕಟ್ಟಿನ ಹಿನ್ನಲೆಯಲ್ಲಿ, ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವವರೆಗೂ ನೇಮಕಾತಿಯನ್ನು ನಡೆಸುವುದು ಸೂಕ್ತವಲ್ಲ ಎಂದು ಮನಗಂಡು, ಸದರಿ ನೇಮಕಾತಿಯನ್ನು ರದ್ದುಗೊಳಿಸಲಾಗಿರುತ್ತದೆ. |
| ಈ) | ಅಲ್ಲದೇ ರಾಜ್ಯದ ಲಕ್ಷಾಂತರ ಅಭ್ಯರ್ಥಿಗಳು ಈ ಇಲಾಖೆಯ ಬೇರೆ ಬೇರೆ ಹುದ್ದೆಗಳಿಗೆ ಪ್ರತ್ಯೇಕವಾಗಿ 500 ರೂ ನಂತೆ ಪರೀಕ್ಷಾ ಶುಲ್ಕವನ್ನು ಭರಿಸಿದ್ದು, ಇದನ್ನು ಸರ್ಕಾರ ಮರು ಪಾವತಿ ಮಾಡುತ್ತದೆಯೇ: ಮರು ಪಾವತಿ ಮಾಡುತ್ತೀರಿ ಎಂದಾದಲ್ಲಿ, ಹೇಗೆ ಮತ್ತು ಯಾವಾಗ ಮರು ಪಾವತಿಸಲಾಗುವುದು? (ವಿವರ ನೀಡುವುದು) | ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/ 86393/ 2018-19 (ಎನ್.ಹೆಚ್.ಕೆ./ಹೆಚ್.ಕೆ) ದಿನಾಂಕ: 25.02.2019 ಹಾಗೂ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 86393(ಹೆಚ್.ಕೆ.)/ 2018-19 ದಿನಾಂಕ: 04.01.2020 ರ ಕಂಡಿಕೆ 5 ರಲ್ಲಿ "Application Fee (Non-Refundable)" ಹಾಗೂ ಕ್ರಮವಾಗಿ ಕಂಡಿಕೆ-(11/9) ರ ಸಾಮಾನ್ಯ ಸೂಚನೆಯ ಉಪ ಕ್ರಮಾಂಕ-(xv/xvi/xvii) ರಲ್ಲಿ, "The application fee paid will not be refunded or adjusted towards any future recruitment under any circumstances" ಎಂದು ತಿಳಿಸಲಾಗಿರುತ್ತದೆ. ಆದ್ದರಿಂದ, ಅರ್ಜಿ ಶುಲ್ಕವನ್ನು ಹಿಂದಿರುಗಿಸಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಎನರ್ಜಿ 19 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ